ಕರ್ನಾಟಕ ಸರ್ಕಾರ
Government of Karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ಡಿ ಎಸ್ ಇ ಆರ್ ಟಿ
DSERT

DEPARTMENT OF STATE EDUCATIONAL RESEARCH AND TRAINING

NO 4, 100 FT RING ROAD, BANASHANKARI 3RD STAGE BENGALURU - 085

E MAIL:dsertkar@gmail.com , Website: http://dsert.kar.nic.in

Phone : 080
26422372
26422373
26422374
Fax:26422377

ಸಂಖ್ಯೆ: DSERT/ಆಶಾ/ಕಟ್ಟಡ ನಿರ್ವಹಣೆ/ಸೆಕ್ಯುರಿಟಿ/ಟೆಂಡರ್/1/2012 ದಿನಾಂಕ:23-04-2012

**ಟೆಂಡರ್ ಗೆ ಹೆಚ್ಚುವರಿ ಸೇರ್ಪಡೆ/ತಿದ್ದುಪಡಿಗಳು**

ವಿಷಯ: 2012-13ನೇ ಸಾಲಿನಲ್ಲಿ ಹೌಸ್ ಕೀಪಿಂಗ್ ಮತ್ತು ಸೆಕ್ಯುರಿಟಿ ಸೇವೆಗಾಗಿ
ಟೆಂಡರ್ ಕರೆಯುವ ಬಗ್ಗೆ.

ಉಲ್ಲೇಖ: ಪ್ರಕಟಣೆ ದಿನಾಂಕ:10/04/2012

***

1. ಪತ್ರಿಕಾ ಪ್ರಕಟಣೆಯಲ್ಲಿ 2 ಲಕೋಟೆ ಬಿಡ್ ಎಂದು ನಮೂದಿಸಲಾಗಿದೆ. ಇದನ್ನು 3 ಲಕೋಟೆ ಬಿಡ್ ಎಂದು ಓದಿಕೊಳ್ಳುವುದು.
2. ಪ್ಲಂಬಿಂಗ್ ಗೆ ಸಂಬಂಧಿಸಿದಂತೆ ನುರಿತ ನೌಕರರು ಪ್ರತ್ಯೇಕವಾಗಿ ಪ್ರತಿ ದಿನ ಕಛೇರಿಯಲ್ಲಿ ಲಭ್ಯವಿರಬೇಕು. ಯಾವುದೇ ದುರಸ್ಥಿ ಕಾರ್ಯವನ್ನು ಅದೇ ದಿನ ಸಮರ್ಪಕವಾಗಿ ಪೂರ್ಣಗೊಳಿಸತಕ್ಕದ್ದು ಎಂದು ಓದಿಕೊಳ್ಳುವುದು.
3. ಅರ್ಹತಾ ಬಿಡ್ ನಲ್ಲಿ ಅರ್ಹತೆಯನ್ನು ಹೊಂದಿದ ಬಿಡ್ ದಾರರ ದಾಖಲೆಗಳ ಪ್ರಕಾರ ಸಂಬಂಧಿಸಿದ ಕಛೇರಿಗಳಲ್ಲಿ ಪರಿಶೀಲಿಸಿ ನಂತರ Technical Bidನ್ನು ಕರೆಯಲು ಕ್ರಮ ವಹಿಸಲಾಗುವುದು.
4. ಮೇಲಿನ ಕ್ರಮಸಂಖ್ಯೆ(3)ರಂತೆ ಪರಿಶೀಲಿಸಿ ತಾಂತ್ರಿಕ ಬಿಡ್ ನ್ನು ದಿ:21/05/2012ಕ್ಕೆ ಬದಲಾಗಿ, 24/05/2012ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.
5. ತಾಂತ್ರಿಕ ಬಿಡ್ ನಲ್ಲಿ ಕೇಳಿರುವ ದಾಖಲೆಗಳಿಗೆ ಸಂಬಂಧಿಸಿದಂತೆ 100 ಅಂಕಗಳನ್ನು ನಿಗಧಿಪಡಿಸಿದ್ದು, ಆಂತರಿಕ ಸಮಿತಿಯಿಂದ ಪರಿಶೀಲಿಸಿ ಕನಿಷ್ಠ 50 ಅಂಕಗಳನ್ನು ಪಡೆಯುವ ಬಿಡ್ ದಾರರ ಕಮರ್ಷಿಯಲ್ ಬಿಡ್ಡನ್ನು ಮಾತ್ರ ತೆರೆಯಲಾಗುವುದು.
6. ಕಮರ್ಷಿಯಲ್ ಬಿಡ್ಡನ್ನು 29/05/2012 ರಂದು ತೆರೆಯಲಾಗುವುದು.
7. ಪ್ರತ್ಯೇಕ ಹಾಜರಾತಿ ಪುಸ್ತಕವನ್ನು ಇಲಾಖೆ ವತಿಯಿಂದ ನಿರ್ವಹಿಸಲಾಗುವುದು.
8. ಕಾರ್ಯಾದೇಶದಲ್ಲಿ ನಿಗಧಿಮಾಡಲಾದ ನೌಕರರ ಹುದ್ದೆ ಮತ್ತು ಸಂಖ್ಯೆಗಳಿಗನುಗುಣವಾಗಿ ಹಾಜರಾತಿ ಕಡ್ಡಾಯ.
9. ಹಾಜರಾತಿ ಪರಿಶೀಲಿಸಿ, ಅದರಂತೆ ಅನುದಾನವನ್ನು ಪಾವತಿಸಲಾಗುವುದು.
10. ಈ ಹಿಂದೆ ಈ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿ, ಈ ಕಛೇರಿಯಲ್ಲಿ ಕೆಲಸ ನಿರ್ವಹಿಸಿದ ಬಗ್ಗೆ ಅಧಿಕೃತ ದೃಢೀಕರಣ ಪಡೆಯದೇ ಬೇರೆ ಹೆಸರಿನಲ್ಲಿ ಬಿಡ್ ಸಲ್ಲಿಸಿರುವುದು ಕಂಡುಬಂದಲ್ಲಿ ಯಾವುದೇ ನೋಟೀಸ್ ಗೆ ಅವಕಾಶವಿಲ್ಲದೆ, ಅಂತಹವರ ಬಿಡ್ಡನ್ನು ರದ್ದುಪಡಿಸಲಾಗುವುದು.
11. ಬಿಡ್ ಡಾಕ್ಯುಮೆಂಟ್ ನಲ್ಲಿ ತಿಳಿಸಿರುವ ಪ್ರಕಾರ ಹಾಗೂ ಯಶಸ್ವಿ ಬಿಡ್ ದಾರರು ಮಾಡಿಕೊಳ್ಳುವ ಕರಾರಿನ ಪ್ರಕಾರ ನಡೆದುಕೊಳ್ಳದಿದ್ದಲ್ಲಿ ತ್ರೈಮಾಸಿಕದಲ್ಲಿ ಬಿಡುಗಡೆ ಮಾಡುವ ಅನುದಾನದ ಶೇಕಡಾ 5ರಷ್ಟು ದಂಡವನ್ನು ವಿಧಿಸಲಾಗುವುದು.

ಮೇಲಿನ ಹೆಚ್ಚುವರಿ ಸೇರ್ಪಡೆ/ತಿದ್ದುಪಡಿಗಳನ್ನು ಗಮನದಲ್ಲಿಟ್ಟುಕೊಂಡು ಬಿಡ್ ದಾರರು ಬಿಡ್ ನ್ನು ಸಲ್ಲಿಸಬೇಕಾಗಿದ್ದು, ಈ ಅಂಶಗಳಲ್ಲಿ ಲೋಪಗಳು ಕಂಡುಬಂದಲ್ಲಿ ಟೆಂಡರ್ ಷರತ್ತುಗಳನ್ವಯ ಕ್ರಮ ಕೈಗೊಳ್ಳಲಾಗುವುದು.

(ನಿರ್ದೇಶಕರ ಆದೇಶದ ಮೇರೆಗೆ)

ನಿರ್ದೇಶಕರ ಪರವಾಗಿ.

(ಸಂ ಮತ್ತು ತ)